

# ಗಣೇಶ್ ಹೊಸ ಗೆಟಪ್

'ಕೃಷ್ಣಂ ಪ್ರಣಯ ಸಖಿ' ಸಿನಿಮಾ ಯಶಸ್ಸಿನ ಬೆನ್ನಲ್ಲೇ ನಟ ಗಣೇಶ್ ಎರಡು ಸಿನಿಮಾಗಳಲ್ಲಿ ತೊಡಗಿಕೊಂಡಿದ್ದಾರೆ. ನೃತ್ಯ ನಿರ್ದೇಶಕ ಧನಂಜಯ ನಿರ್ದೇಶನದ 'ಪಿನಾಕ' ಹಾಗೂ ಗೀತ ಸಾಹಿತಿ ಅರಸು ಅಂತಾರೆ ನಿರ್ದೇಶನದ ಹೊಸ ಸಿನಿಮಾದಲ್ಲಿ ಗಣೇಶ್ ಸದ್ಯ ನಟಿಸುತ್ತಿದ್ದಾರೆ.

'ಪಿನಾಕ' ಸಿನಿಮಾದಲ್ಲಿ ಎರಡು ಶೇಡ್‌ನಲ್ಲಿ ಗಣೇಶ್ ಕಾಣಿಸಿಕೊಂಡಿದ್ದು, ತ್ರಿಶೂಲಧಾರಿ ಗೆಟಪ್‌ನಲ್ಲಿರುವ ಪೋಸ್ಟರ್, ಸಿನಿಮಾ ಬಗ್ಗೆ ಕುತೂಹಲ ಹುಟ್ಟುಹಾಕಿದೆ. ಅರಸು ಅಂತಾರೆ ನಿರ್ದೇಶನದ ಚಿತ್ರದ ಮೊದಲ ಹಂತದ ಶೂಟಿಂಗ್ ಪೂರ್ಣಗೊಂಡಿದ್ದು, ಇನ್ನಷ್ಟೇ ಶೀರ್ಷಿಕೆ ಘೋಷಣೆಯಾಗಬೇಕಿದೆ. ನಾಯಕಿ ಅಮೃತಾ ಅಯ್ಯರ್, ರಂಗಾಯಣ ರಘು, ರವಿಶಂಕರ್ ಗೌಡ, ಕಾಕ್ರೋಚ್ ಸುಧಿ, ಅರುಣ ಬಾಲರಾಜ್ ಮುಂತಾದವರು ಈ ಸಿನಿಮಾದಲ್ಲಿದ್ದಾರೆ. ಇದರ ಜೊತೆಗೆ ರಮೇಶ್ ಅರವಿಂದ್ ಜೊತೆ 'ಯುವರ್ ಸಿನ್ಸಿಯರ್ಲಿ ರಾಮ್' ಸಿನಿಮಾದಲ್ಲಿಯೂ ಗಣೇಶ್ ಅಭಿನಯಿಸುತ್ತಿದ್ದಾರೆ.

# ಒಟಿಟಿಯಲ್ಲಿ 'ಅಮೃತಮತಿ'

ಸಾಹಿತಿ, ನಿರ್ದೇಶಕ ಬರಗೂರು ರಾಮಚಂದ್ರಪ್ಪ ಅವರ ನಿರ್ದೇಶನದ 'ಅಮೃತಮತಿ' ಚಿತ್ರವು ಅಮೆಜಾನ್ ಪ್ರೈಂ ಒಟಿಟಿ ವೇದಿಕೆಯಲ್ಲಿ ಬಿಡುಗಡೆಯಾಗಿದೆ.

ಚಿತ್ರವು ಹದಿಮೂರನೇ ಶತಮಾನದ ಕನ್ನಡ ಕವಿ ಜನ್ನನ 'ಯಶೋಧರ ಚರಿತ' ಕಾವ್ಯ ಪ್ರಸಂಗವನ್ನು ಆಧರಿಸಿ ರೂಪುಗೊಂಡಿದೆ. ಈ ಚಿತ್ರದಲ್ಲಿ ಮೂಲ ಕಥನವನ್ನು ಮರುಸೃಷ್ಟಿ ಮಾಡಿ ನಿರೂಪಿಸಿರುವುದು ಒಂದು ವಿಶೇಷ.

ಬರಗೂರು ಅವರು ನಿರ್ದೇಶನದ ಜೊತೆಗೆ ಚಿತ್ರಕಥೆ, ಸಂಭಾಷಣೆ ಮತ್ತು ಗೀತರಚನೆ ಮಾಡಿದ್ದಾರೆ. ನಟಿ ಹರಿಪ್ರಿಯ ಅವರು 'ಅಮೃತಮತಿ'ಯ ಪಾತ್ರದಲ್ಲಿ, ನಟ ಕಿಶೋರ್ ಅವರು 'ಯಶೋಧರ'ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಸುಂದರ್‌ರಾಜ್, ಪ್ರಮೀಳಾ ಜೋಷಾಯ್, ತಿಲಕ್, ಅಂಬರೀಶ್ ಸಾರಂಗಿ, ವತ್ಸಲಾ ಮೋಹನ್, ಸುಪ್ರಿಯಾ ರಾವ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಇಂಚರ ಪುಟ್ಟಣ್ಣ ಪ್ರೊಡಕ್ಷನ್ ಲಾಂಛನದಲ್ಲಿ ಪುಟ್ಟಣ್ಣ ಅವರು ಈ ಸಿನಿಮಾ ನಿರ್ಮಿಸಿದ್ದಾರೆ. ಸುರೇಶ್ ಅರಸು ಸಂಕಲನ, ನಾಗರಾಜ್ ಆದವಾನಿ ಛಾಯಾಚಿತ್ರಗ್ರಹಣ, ಶಮಿತಾ ಮಲ್ನಾಡ್ ಸಂಗೀತ ನಿರ್ದೇಶನ, ತ್ರಿಭುವನ್ ನೃತ್ಯ ಸಂಯೋಜನೆ ಚಿತ್ರಕ್ಕಿದೆ.





# ಚೂಸಿ ಶ್ರೀನಿಧಿ

'ಕೆಜಿಎಫ್ ಚಾಪ್ಟರ್ 2' ಸಿನಿಮಾ ಯಶಸ್ಸಿನ ನಂತರ ನಟಿ ಶ್ರೀನಿಧಿ ಶೆಟ್ಟಿ ತಮ್ಮ ಪಾತ್ರಗಳ ಆಯ್ಕೆಯಲ್ಲಿ ತುಂಬಾ ಚೂಸಿಯಾಗಿದ್ದಾರೆ– ಹೀಗೊಂದು ಮಾತು ಈಚೆಗೆ ಗಾಂಧಿನಗರದಲ್ಲಿ ಸುದ್ದಿಯಾಗಿತ್ತು.

'ಹಿಟ್ 3' ಸಿನಿಮಾ ಸುದ್ದಿಗೋಷ್ಠಿಯಲ್ಲಿ ಈ ಹೇಳಿಕೆಗೆ ಸ್ಪಷ್ಟನೆ ಎಂಬಂತೆ ಉತ್ತರವನ್ನೂ ಕೊಟ್ಟಿದ್ದಾರೆ ಶ್ರೀನಿಧಿ.

"ಕೆಜಿಎಫ್ 2' ನಂತರ ನಾನು ಪಾತ್ರಗಳ ಬಗ್ಗೆ ಬಹಳ ಸೆಲೆಕ್ಟಿವ್ ಆಗಿದ್ದೇನೆ ಎಂಬುದು ಕೆಲವರ ಅಭಿಪ್ರಾಯ. ಆದರೆ ಸಿನಿಮಾರಂಗಕ್ಕೆ ಬಂದ ದಿನದಿಂದಲೂ ನಾನು ಪಾತ್ರಗಳ ಆಯ್ಕೆಯಲ್ಲಿ ಬಹಳ ಜಾಗ್ರತೆಯಿಂದಿದ್ದೇನೆ. ಇದು 'ಕೆಜಿಎಫ್' ನಂತರ ಆದ ಬದಲಾವಣೆಯಲ್ಲ" ಎಂದಿದ್ದಾರೆ.

ಈ ಬಗ್ಗೆ ಮತ್ತೂ ಮಾತು ಮುಂದುವರೆಸಿರುವ ಅವರು, "2016ರಲ್ಲಿ 'ಕೆಜಿಎಫ್' ಚಿತ್ರಕ್ಕೆ ಸಹಿ ಮಾಡಿದೆ. ಆರಂಭದಲ್ಲಿಯೇ ನಾನು ತುಂಬಾ ಯೋಚಿಸಿದ್ದೆ. 2018ರಲ್ಲಿ ಸಿನಿಮಾ ಬಿಡುಗಡೆಯಾಯಿತು. ಅಲ್ಲಿಯವರೆಗೂ ನಾನು ಯಾವುದಕ್ಕೂ ಒಪ್ಪಿರಲಿಲ್ಲ. ಎಷ್ಟೋ ಸ್ಕ್ರಿಪ್ಟ್‌ಗಳು ಬಂದವು, ಕಥೆ ಹೇಳಿದರು. ಆಮೇಲೆ 'ಕೆಜಿಎಫ್ 2' ಸಿನಿಮಾ ಬಂತು" ಎಂದಿದ್ದಾರೆ.

"ಕೆಜಿಎಫ್' ಸಿನಿಮಾ ಬಿಡುಗಡೆಗೆ ಮುನ್ನವೂ ಉತ್ತಮ ಪ್ರಾಜೆಕ್ಟ್‌ಗಳ ಕಡೆಗೆ ಗಮನ ನೀಡಬೇಕೆಂದು ಕೆಲವು ಅವಕಾಶಗಳನ್ನು ನಿರಾಕರಿಸಿದೆ. ಇದು ಪ್ರಜ್ಞಾಪೂರ್ವಕವಾಗಿ ಅನುಸರಿಸಿದ ಕ್ರಮ. 'ಕೆಜಿಎಫ್ 2' ಬ್ಲಾಕ್‌ಬಸ್ಟರ್ ಆಯಿತು ಎಂಬ ಕಾರಣಕ್ಕೆ ಬದಲಾದ ಸಂಗತಿಯಲ್ಲ" ಎಂದು ವಿವರಣೆ ನೀಡಿದ್ದಾರೆ.

